ನಂ. ನಅಕೋ/ಕೆ.ಎಂ.ಆರ್.ಪಿ/ಸಿಆರ್/41/2007-08

ಜಿಲ್ಲಾಧಿಕಾರಿಯವರ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ದಿನಾಂಕ: 27-08-2009

# "ಅಧಿಸೂಚನೆ"

**ವಿಷಯ**: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರಸಭೆಯ ಕರ್ನಾಟಕ ಪೌರಸುಧಾರಣಾ ಯೋಜನೆಯ ಅನುಷ್ಠಾನ ಘಟಕಕ್ಕೆ ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರಸಭೆಯ ಕರ್ನಾಟಕ ಪೌರಸುಧಾರಣಾ ಯೋಜನೆಯ ಅನುಷ್ಠಾನ ಘಟಕಕ್ಕೆ ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಸದರಿ ಘಟಕಕ್ಕೆ ಅವಶ್ಯ ವಿರುವ ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿಗಳ ವಿವರ ಈ ಕೆಳಕಾಣಿಸಿದಂತೆ ಇರುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು **ದಿನಾಂಕ: 24-09-2009ರಂದು ಕೊನೆಯ ದಿನ** ವಾಗಿರುತ್ತದೆ. ನಿಗದಿತ ಅರ್ಜಿ ನಮೂನೆಗಳನ್ನು **ದಿನಾಂಕ: 10-09-2009**ರನಂತರ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು-01 ಇಲ್ಲಿ ಪಡೆಯಬಹುದಾಗಿದೆ.

| ಕ್ರ. ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ವಿದ್ಯಾರ್ಹತೆ | ಸೇವಾನುಭವ |
|---|---|---|---|---|---|
| 1 | ಸಹಾಯಕ ಅಭಿಯಂತರರು | 01 | 20,000/- | ಬಿ.ಇ (ಸಿವಿಲ್) ಅಥವಾ ಇದಕ್ಕೆ ತತ್ಸಮಾನವಾದ ಪದವಿ. ಸರಾಸರಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಗಳಿಸಿರಬೇಕು. | ಕನ್ಸ್‌ಸ್ಟ್ರಕ್ಷನ್ ಫೀಲ್ಡ್‌ನಲ್ಲಿ ಕನಿಷ್ಟ 5 ವರ್ಷ ಅನುಭವ ಹೊಂದಿರಬೇಕು. ನೀರು ಸರಬರಾಜು ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆ ನಿರ್ವಹಣೆಯಲ್ಲಿ ಅನುಭವ ಹೊಂದಿರಬೇಕು. |
| 2 | ಕಿರಿಯ ಅಭಿಯಂತರರು | 01 | 15,000/- | ಡಿಪ್ಲೋಮ (ಸಿವಿಲ್) ಅಥವಾ ಇದಕ್ಕೆ ತತ್ಸಮಾನವಾದ ಪದವಿ. ಸರಾಸರಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಗಳಿಸಿರಬೇಕು. | ಕನ್ಸ್‌ಸ್ಟ್ರಕ್ಷನ್ ಫೀಲ್ಡ್‌ನಲ್ಲಿ ಕನಿಷ್ಟ 5 ವರ್ಷ ಅನುಭವ ಹೊಂದಿರಬೇಕು. ನೀರು ಸರಬರಾಜು ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆ ನಿರ್ವಹಣೆಯಲ್ಲಿ ಅನುಭವ ಹೊಂದಿರಬೇಕು. |
| 3 | ಅಕೌಂಟೆಂಟ್ | 01 | 12,000/- | ಬಿ.ಕಾಂ ಪದವಿದರ ರಾಗಿರಬೇಕು. ಸರಾಸರಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. | ಲೆಕ್ಕ ನಿರ್ವಹಣೆಯಲ್ಲಿ ಕನಿಷ್ಟ 7 ವರ್ಷಗಳ ಅನುಭವ ಹೊಂದಿರಬೇಕು. |

| | | | | | |
|---|---|---|---|---|---|
| 4 | ಪ್ರಥಮ ದರ್ಜೆ ಸಹಾಯಕರು | 01 | 10,000/- | ಪದವಿದರರಾಗಿರಬೇಕು. ಸರಾಸರಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಗಳಿಸಿರಬೇಕು. | ಕಛೇರಿ ಆಡಳಿತದಲ್ಲಿ ಕನಿಷ್ಟ 5 ವರ್ಷಗಳ ಅನುಭವ ಹೊಂದಿರಬೇಕು. |
| 5 | ಕಂಪ್ಯೂಟರ್ ಆಪರೇಟರ್/ ಡಾಟಾಎಂಟ್ರಿ ಆಪರೇಟರ್ | 01 | 10,000/- | ಡಿಪ್ಲೋಮ ಇನ್ ಕಂಪ್ಯೂಟರ್ ಸೈನ್ಸ್ | ಡಾಟಾ ಎಂಟ್ರಿ ಆಪರೇಟರ್ ಆಗಿ ಕನಿಷ್ಟ ಒಂದು ವರ್ಷ ಅನುಭವ ಹೊಂದಿರಬೇಕು. |
| 6 | ವರ್ಕ್ ಇನ್ಸ್‌ಪೆಕ್ಟರ್ | 03 | 8,000/- | ಐ.ಟಿ.ಐ (ಸಿವಿಲ್) | ಸಿವಿಲ್ ವರ್ಕ್ಸ್‌ನಲ್ಲಿ ಕನಿಷ್ಟ ಒಂದು ವರ್ಷ ಅನುಭವ ಹೊಂದಿರಬೇಕು. |

**ಷರತ್ತುಗಳು**

1) ಅಭ್ಯರ್ಥಿಗಳ ನೇಮಕಾತಿಯು ಪೂರ್ಣ ಗುತ್ತಿಗೆ ಆಧಾರವಾಗಿದ್ದು, ಇದರ ಕಾಲಾವಧಿಯು ಕೇವಲ 2 ವರ್ಷಗಳಿಗೆ ಅಥವಾ ಪ್ರಾಜೆಕ್ಟ್ ಪೂರ್ಣಗೊಳ್ಳುವುದರಲ್ಲಿ ಯಾವುದು ಶೀಘ್ರವಾಗುವುದು ಅಲ್ಲಿಯವರೆಗೆ ಇರುತ್ತದೆ.
2) ಆಸಕ್ತಿಯುಳ್ಳ ಅಭ್ಯರ್ಥಿಗಳು ಸಂಬಂಧಪಟ್ಟ ವಿದ್ಯಾರ್ಹತೆ ಹಾಗೂ ಅನುಭವವನ್ನು ಹೊಂದಿದಲ್ಲಿ ಮಾತ್ರ ಅರ್ಜಿಯನ್ನು ಸಲ್ಲಿಸುವುದು ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳ ನಕಲುಗಳನ್ನು ದೃಡೀಕರಿಸಿ 2 ಪ್ರತಿಗಳನ್ನು ಮತ್ತು ಒಂದು ಭಾವ ಚಿತ್ರವನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
3) ಆಯ್ಕೆಯ ಅವಧಿಯಲ್ಲಿ ಅಭ್ಯರ್ಥಿಗಳು ಜನನ ಪ್ರಮಾಣ ಪತ್ರ, ವಿದ್ಯಾರ್ಹತಾ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ ಹಾಗೂ ಸಂಬಂಧಪಟ್ಟ ಮೂಲ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಬೇಕು.
4) ಅಭ್ಯರ್ಥಿಗಳ ಆಯ್ಕೆಯು ಆಯ್ಕೆ ಸಮಿತಿಯ ನಿಂಬಂಧನೆಗಳಿಗೆ ಒಳಪಟ್ಟಿರುತ್ತದೆ.
5) ಈ ನೇಮಕಾತಿಯು ಏಕ ಕಾಲ ಕಾರ್ಯವಾಗಿದ್ದು, ಮೇಲ್ಕಂಡ ಯೋಜನಾ ಅವಧಿಗೆ ಮಾತ್ರ ಸೀಮಿತವಾರುತ್ತದೆ ಹಾಗೂ ಈ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಖಾಯಂ ಎಂದು ಪರಿಗಣಿಸತಕ್ಕದಲ್ಲ.
6) ಸೂಕ್ತ ಲಗತ್ತುಗಳಿಲ್ಲದೆ ಸಲ್ಲಿಸಲಾದ ಅರ್ಜಿಗಳನ್ನು ಯಾವುದೇ ಸೂಚನೆಗಳಿಲ್ಲದೇ ತಿರಸ್ಕರಿಸಲಾಗುವುದು.

ಸಹಿ/-
ಜಿಲ್ಲಾಧಿಕಾರಿಯವರ ಪರವಾಗಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಬೆಂಗಳೂರು

(ಕರಡು ಪ್ರತಿ ಜಿಲ್ಲಾಧಿಕಾರಿಯವರಿಂದ ಅನುಮೋದಿಸಲ್ಪಟ್ಟಿದೆ)